# ಶಿವಮೊಗ್ಗ ಜಿಲ್ಲೆಯಲ್ಲಿ ಜ್ಞಾನವಾಹಿನಿಗೆ ಭವ್ಯ ಸ್ವಾಗತ

**ಕ**ರ್ನಾಟಕದ ಜನಸಾಮಾನ್ಯರಿಗೆ, ವಿಶೇಷವಾಗಿ ಗ್ರಾಮವಾಸಿಗಳಿಗೆ ಭಗವಾನ್ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಸಂದೇಶವನ್ನು ಅಕ್ಷರಶಃ ಮನೆಬಾಗಿಲಿಗೆ ಒಯ್ಯುವ ಜ್ಞಾನವಾಹಿನಿ ಯೋಜನೆಯನ್ನು ಹಮ್ಮಿಕೊಂಡು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ತನ್ನ ಯೋಜನೆಯಡಿ ನಿಗದಿಸಿಕೊಂಡಂತೆ ಅಭಿಯಾನವನ್ನು ಚಾಮರಾಜ ನಗರ ಜಿಲ್ಲೆಯಿಂದ ಪ್ರಾರಂಭಿಸಿ ಆ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಂಡು ಅಲ್ಲಿಂದ ಮುಂದುವರಿಸಿ ಕಳೆದ ನವೆಂಬರ್ ೫, ೨೦೦೩ರಂದು ಶಿವಮೊಗ್ಗ ಜಿಲ್ಲೆಯನ್ನು ತಲುಪಿತು.



ಶಿವಮೊಗ್ಗ ಜಿಲ್ಲೆಯ ಬಿ.ಆರ್. ಪ್ರಾಜೆಕ್ಟ್ ಬಳಿ ಜ್ಞಾನವಾಹಿನಿಗೆ ನಗರದ ಗಣ್ಯರಿಂದ ಅದ್ದೂರಿ ಸ್ವಾಗತ. ಚಿತ್ರದಲ್ಲಿರುವವರು ಸ್ವಾಮಿಗಳಾದ ಆತ್ಮವಿದಾನಂದಜಿ, ಪರಹಿತಾನಂದಜಿ ಹಾಗೂ ಕುವೆಂಪು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀ ಚಿದಾನಂದಗೌಡರು, ಊರ ಪಟೇಲರಾದ ಸಿದ್ಧಲಿಂಗಪ್ಪನವರು ಮತ್ತು ಇತರರು.

ಕರ್ನಾಟಕದ ಅತ್ಯಂತ ಸುಂದರ ಮಲೆನಾಡ ಪ್ರದೇಶವಾದ ಶಿವಮೊಗ್ಗ ಜಿಲ್ಲೆ ಆಧ್ಯಾತ್ಮಿಕ ಚಿಂತನೆಗಳಿಗೆ ಫಲವತ್ತಾದ ಸ್ಥಳವಾಗಿದೆ. ಅಂತಹ ಚಿಂತನೆಗಳಿಗೆ ಬಲವಾದ ಪ್ರೇರಣೆಯ ಕೊರತೆಯನ್ನು ಈ ಪ್ರಭಾವಪೂರ್ಣವಾದ ಕಾರ್ಯಕ್ರಮ ತುಂಬಿತೆಂಬುದು ಸಂತಸದ ಸಂಗತಿ.

ಈ ಪ್ರಶಾಂತ ಮಲೆನಾಡು ಪ್ರದೇಶವನ್ನು ಬಿ. ಆರ್. ಪ್ರಾಜೆಕ್ಟ್ ಬಳಿ ತಲಪುತ್ತಿದ್ದಂತೆಯೇ ಅಲ್ಲಿಯ ಜನತೆ ಜ್ಞಾನವಾಹಿನಿಯನ್ನು ಬರಮಾಡಿಕೊಂಡ ರೀತಿ ಅತ್ಯಂತ ಹೃದಯಸ್ಪರ್ಶಿಯಾಗಿತ್ತು. ಮೈಸೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿಯವರು ತಾವೇ ಖುದ್ದಾಗಿ ಅಲ್ಲಿ ಉಪಸ್ಥಿತರಿದ್ದು ಆ ಜಿಲ್ಲೆಯಲ್ಲಿನ ಅಭಿಯಾನಕ್ಕೆ ಚಾಲನೆ ನೀಡಿದರು. ತಿಂಗಳ ಪ್ರಥಮಾರ್ಧದಲ್ಲಿ ಸ್ವಾಮಿ ಪರಹಿತಾನಂದಜಿಯವರೂ ಕಡೆಯ ಅರ್ಧದಲ್ಲಿ ಸ್ವಾಮಿ ಆತ್ಮಜ್ಞಾನಂದಜಿಯವರೂ ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದರು. ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಅಪಾರ ಸಂಖ್ಯೆಯಲ್ಲಿ ಜನತೆ ಉತ್ಸಾಹದಿಂದ ಜ್ಞಾನವಾಹಿನಿಯನ್ನು ಸ್ವಾಗತಿಸಿದರಲ್ಲದೆ ನಡೆದ ಕಾರ್ಯಕ್ರಮಗಳಲ್ಲೆಲ್ಲ ಭಾಗವಹಿಸಿದರು. ಶಿಕ್ಷಣತಜ್ಞರೂ, ಕುವೆಂಪು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ. ಚಿದಾನಂದಗೌಡರೇ ಮೊದಲಾದ ಪ್ರಮುಖ ಗಣ್ಯವ್ಯಕ್ತಿಗಳೂ, ಅನೇಕ ಸ್ವಯಂ ಸೇವಾ ಸಂಸ್ಥೆಗಳಿಗೆ ಸೇರಿದ ಸಮಾಜಸೇವಾಸಕ್ತರಾದ ಕಾರ್ಯಕರ್ತರೂ, ಹಾಗೂ ಸಾಮಾನ್ಯ ಜನತೆ ಯಾವುದೇ ಜಾತಿ, ಕುಲ ಸಾಮಾಜಿಕ ಪ್ರತಿಷ್ಠೆಯ ಭೇದವಿಲ್ಲದೆ ಒಂದಾಗಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಒಟ್ಟು, ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು.

ಜ್ಞಾನವಾಹಿನಿ ಅಭಿಯಾನ ಶಿವಮೊಗ್ಗ ಜಿಲ್ಲೆಯಲ್ಲಿನ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯಿತು. ಪ್ರತಿಯೊಂದು ಪ್ರದೇಶದಲ್ಲೂ ಸುಮಾರು ೨ ದಿನಗಳ ಕಾರ್ಯಕ್ರಮವಿತ್ತು. ಮೊದಲ ದಿನದ ಬೆಳಗ್ಗೆ ಸ್ವಾಮಿ ವಿವೇಕಾನಂದರ ಪ್ರತಿಮೆಯೊಂದಿಗೆ ಹೊರಡುತ್ತಿದ್ದ ಮೆರವಣಿಗೆಯನ್ನು ಜನ ಬರಮಾಡಿಕೊಳ್ಳುತ್ತಿದ್ದ ರೀತಿ ಅಪೂರ್ವವಾಗಿತ್ತು. ಮನೆಬಾಗಿಲಿಗೆ ವಾಹಿನಿ ತಲುಪುತ್ತಲೇ ಸ್ವಾಮೀಜಿಯವರ ಪ್ರತಿಮೆಗೆ ಆರತಿ ಪೂಜೆಗಳನ್ನು ಮಾಡಿ ಬರಮಾಡಿಕೊಳ್ಳುತ್ತಿದ್ದರು. ನಂತರ ನಡೆಯುತ್ತಿದ್ದ ವ್ಯಕ್ತಿತ್ವ ವಿಕಸನ ಕಾರ್ಯಾಗಾರಗಳಲ್ಲಿ ಶಾಲಾಮಕ್ಕಳು ಭಾಗವಹಿಸುತ್ತಿದ್ದರು. ಸಂಜೆ ಸತ್ಸಂಗ, ಸಾರ್ವಜನಿಕ ಸಭೆ, ಮತ್ತು ಶ್ರೀರಾಮಕೃಷ್ಣ ವಿವೇಕಾನಂದರ ಸಂದೇಶಗಳ ವೀಡಿಯೋ ಪ್ರದರ್ಶನ ಜನರ ಅಪಾರ ಮೆಚ್ಚುಗೆಯನ್ನು ಗಳಿಸಿತು. ಸ್ವಾಮಿಗಳ ನೇತೃತ್ವದಲ್ಲಿ ನಡೆಯುತ್ತಿದ್ದ ಮಾರ್ಗದರ್ಶಿತಧ್ಯಾನದಲ್ಲಿ ಪಾಲ್ಗೊಂಡ ಜನತೆ ತಮ್ಮ ಸಂದೇಹಗಳನ್ನು ಮುಂದಿಟ್ಟು ಪರಿಹರಿಸಿಕೊಳ್ಳುವುದನ್ನು ಕಾಣಬಹುದಿತ್ತು. ಅನೇಕ ಚಿಕ್ಕಮಕ್ಕಳು ತೋರುತ್ತಿದ್ದ ಉತ್ಸಾಹ ಜ್ಞಾನವಾಹಿನಿಯ ಮುಖ್ಯ ಅಂಗವಾದ ಕಿಶೋರ ಕೇಂದ್ರದ ಸುಂದರವಾದ ಕಲ್ಪನೆ ಸಾಕಾರಗೊಳಿಸುವಂತಿತ್ತು. ರಾಮಕೃಷ್ಣ ವಿವೇಕಾನಂದ ಧಾರ್ಮಿಕ ಸಾಹಿತ್ಯದ ಪುಸ್ತಕಗಳು ದಾಖಲೆ ಯೋಗ್ಯವಾದ ಸಂಖ್ಯೆಯಲ್ಲಿ ಮಾರಾಟಗೊಂಡವು. ◆

# ಬೆಂಗಳೂರಿನಲ್ಲಿ ಬೃಹತ್ ರಥೋತ್ಸವ

ಶ್ರೀಶಾರದಾದೇವಿಯವರ ೧೫೧ನೇ ವರ್ಷದ ಜನ್ಮ ದಿನೋತ್ಸವದ ಉದ್ಘಾಟನಾ ಸಮಾರಂಭ ಡಿಸೆಂಬರ್ ೭ನೇ ಭಾನುವಾರ ಬೆಳಿಗ್ಗೆ ೯.೩೦ಕ್ಕೆ ರಾಮಕೃಷ್ಣಮಠ, ಬಸವನಗುಡಿ, ಬೆಂಗಳೂರು ಮತ್ತು ವಿವೇಕಾನಂದ ಆಶ್ರಮ, ಅಲಸೂರು, ಬೆಂಗಳೂರಿನ ಸಂಯುಕ್ತ ಆಶ್ರಯದಲ್ಲಿ ರಾಮಕೃಷ್ಣ ಮಠ, ಬೆಂಗಳೂರಿನಲ್ಲಿ ಆಚರಿಸಲ್ಪಟ್ಟಿತು. ಕರ್ನಾಟಕದ ಗೃಹಮಂತ್ರಿಗಳಾದ ಮಾನ್ಯ ಶ್ರೀಯುತ ಮಲ್ಲಿಕಾರ್ಜುನ ಖರ್ಗೆಯವರು ಈ ಸಮಾರಂಭವನ್ನು ಉದ್ಘಾಟಿಸಿದರು. ಅವರು ಈ ಸಂದರ್ಭವಲ್ಲಿ "ಶ್ರೀಶಾರದಾದೇವಿಯವರು ತಮ್ಮ ಪ್ರೀತಿಯನ್ನು ಯಾವುದೇ ರೀತಿಯ ಭೇದವಿಲ್ಲದೆ ಎಲ್ಲ ಜಾತಿ ಮತ ಪಂಥದವರಿಗೆ ಹಂಚಿದರು. ಅವರ ಉಪದೇಶಗಳನ್ನು ನಮ್ಮ ಜೀವನದಲ್ಲಿ ಅನುಸರಿಸಿದರೆ, ನಮ್ಮ ಜೀವನವು ಖಂಡಿತವಾಗಿ ಉತ್ತಮಗೊಳ್ಳುತ್ತದೆ" ಎಂದರು. ಅವರು ಜಗಜ್ಜನನಿ ಶ್ರೀಶಾರದಾಮಾತೆ (ಕನ್ನಡ) ಮತ್ತು *Sri Sarada Devi — The Mother of All* ಎಂಬ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸ್ವಾಮಿ ಹರ್ಷಾನಂದಜೀಯವರು ಶ್ರೀಶಾರದಾದೇವಿಯವರ ಅವತಾರದ ಮಹತ್ವದ ಬಗ್ಗೆ ಮಾತನಾಡಿದರು.

ಸಭೆಯ ನಂತರ ಒಂದು ಬೃಹತ್ ರಥೋತ್ಸವದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮೆರವಣಿಗೆಯಲ್ಲಿ ನಾದಸ್ವರ, ಡೊಲುಕುಣಿತ, ಇತ್ಯಾದಿಗಳಿದ್ದವು. ೧೫೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಆಶ್ರಮದ ಭಕ್ತರೂ ಸೇರಿದಂತೆ ಮೆರವಣಿಗೆಯಲ್ಲಿ ಸುಮಾರು ೬,೦೦೦ ಜನ ಪಾಲ್ಗೊಂಡಿದ್ದರು. ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ❖



ಶ್ರೀಮಾತೆಯವರ ವಿಗ್ರಹವನ್ನು ಒಳಗೊಂಡ ಸಾಲಂಕೃತ ರಥ

ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರವಾದ ಕೊಲ್ಕತಾದಲ್ಲಿನ ಬೇಲೂರುಮಠದ ಆದೇಶದಂತೆ ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಹೆಸರನ್ನು 'ರಾಮಕೃಷ್ಣ ಮಠ' ಎಂದು ಬದಲಾಯಿಸಲಾಗಿದೆ. ಇನ್ನುಮುಂದೆ ಇದೇ ಹೆಸರಿನಲ್ಲೇ ಎಲ್ಲ ವ್ಯವಹಾರವೂ ನಡೆಯುತ್ತದೆ.

## ಜ್ಞಾನವಾಹಿನಿ ಕಾರ್ಯಕ್ರಮಗಳು ಜನವರಿ 2004

ಜ್ಞಾನವಾಹಿನಿ ಕಾರ್ಯಕ್ರಮಗಳು ಗದಗ ಜಿಲ್ಲೆಯಲ್ಲಿ ಡಿಸೆಂಬರ್ 22 ರಿಂದ ಪ್ರಾರಂಭವಾಗುತ್ತವೆ. ಕಾರ್ಯಕ್ರಮಗಳ ವಿವರಗಳನ್ನು ಗದಗದಲ್ಲಿರುವ ಶ್ರೀಯುತ ಡಿ.ಆರ್. ಪಾಟೀಲ್, ಫೋನ್.ನಂ.08372-589111, ಇವರಿಂದ ಪಡೆಯಬಹುದು.

ಹಾಗೆಯೇ ಜ್ಞಾನವಾಹಿನಿ ಕಾರ್ಯಕ್ರಮಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಜನವರಿ 22 ರಿಂದ ಪ್ರಾರಂಭವಾಗುತ್ತವೆ. ಈ ಜಿಲ್ಲೆಯಲ್ಲಿ ನಡೆಯಲಿರುವ ಕಾರ್ಯಕ್ರಮಗಳ ವಿವರಗಳನ್ನು ಚಿತ್ರದುರ್ಗ ದಲ್ಲಿರುವ ಶ್ರೀಯುತ ಮಾಕಂ ಶ್ರೀನಿವಾಸಲು, (ಅನಂತ ಸಾ ಮಿಲ್ಸ್), ಫೋನ್. ನಂ. 08194-435398/428717, ಇವರಿಂದ ಪಡೆಯಬಹುದು. 'ವಿವೇಕ ಪ್ರಭ' ಪತ್ರಿಕೆಯ ಸ್ಥಳೀಯ ಚಂದಾದಾರರೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ವಿನಂತಿ.


## ಶಾರದಾ ರಾಮಕೃಷ್ಣ ಆಶ್ರಮ

#1269, ಆಕಾಶವಾಣಿ ಕಛೇರಿ ಎದುರು, ಚಿತ್ರದುರ್ಗ - 577 501

ಶ್ರೀಮಾತೆ ಶ್ರೀಶಾರದಾದೇವಿಯವರ 151ನೇ ಜನ್ಮದಿನೋತ್ಸವ

ದಿನಾಂಕ : 4-1-2004 ಭಾನುವಾರ (ಬೆಳಿಗ್ಗೆ 10.00 ರಿಂದ 1.30)

☆ ಜೀವಂತ ದುರ್ಗಾ ಪೂಜೆ : ನಗರದ ಕೊಳೆಗೇರಿಗಳಲ್ಲಿ ವಾಸಿಸುವ ಭಿಕ್ಷೆ ಬೇಡುವ 51 ಅಶಕ್ತ ತಾಯಂದಿರಿಗೆ ಅನ್ನದಾನ, ವಸ್ತ್ರದಾನ, ಧಾನ್ಯದಾನಗಳಿಂದ ಸತ್ಕಾರ. ☆. ಅಧ್ಯಯನ ವ್ರತ, ಸಾರ್ವಜನಿಕರು ಶ್ರೀಮಾತೆ ಶ್ರೀಶಾರದಾದೇವಿಯವರ ಸಮಗ್ರ ಜೀವನ ಚರಿತ್ರೆಯನ್ನು ಓದುವುದು. ☆ ಲೋಕಕಲ್ಯಾಣಾರ್ಥವಾಗಿ ಶ್ರೀಗಣಪತಿ ಹೋಮ ಮತ್ತು ಶ್ರೀದುರ್ಗಾಹೋಮ.

ಉದ್ಘಾಟನೆ : ಪರಮಪೂಜ್ಯ ಸ್ವಾಮಿ ಜಗದಾತ್ಮಾನಂದಜಿ ಮಹಾರಾಜ್, ಮುಖ್ಯಸ್ಥರು, ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ

ಸರ್ವರಿಗೂ ಆದರದ ಆಹ್ವಾನವಿದೆ.